ಹೊದಿಕೆಯಿಂದ ಬೆಳಗತೊಡಗಿವೆ. ಶಿಖರದ ಕಲಶಗಳೆಲ್ಲ ಚಿನ್ನದ ಲೇಪನ ಹೊಂದಿವೆ. ಇಷ್ಟು ಮಾತ್ರವಲ್ಲ, ವಾಡಿಕೆಯಂತೆ ನಡೆಯುವ ಎಲ್ಲ ಉತ್ಸವಾದಿಗಳ ವೈಭವಕ್ಕೆ ಮಿತಿಯೇ ಇಲ್ಲ. ಲಾರಿ ತುಂಬ ಎಲ್ಲಿಂದಲೋ ಬರುವ ಹೂವಿನ ಮಾಲೆ, ರಥ ಚಲಿಸುವಲ್ಲೆಲ್ಲ ಬಣ್ಣಬಣ್ಣದ ವಿದ್ಯುದ್ದೀಪದ ಅಲಂಕಾರ ಒಂದೇ ಎರಡೇ...

ಶಂಕರ ಕುಂಬಾಳ್ಕರ್ ಅವರ ಸೇವೆ ಎಂದು ಯಾರೂ ಹೇಳದಿದ್ದರೂ ಈ ಎಲ್ಲ ಸಂಭ್ರಮಕ್ಕೆ ಅವರೇ ಕಾರಣ ಎಂಬುದು ಎಲ್ಲರೂ ಬಲ್ಲ ಸಂಗತಿ. ಇಂಥ ಒಂದು ಸಂದರ್ಭವನ್ನೂ ಅವರು ತಪ್ಪಿಸಿಕೊಳ್ಳುತ್ತಿರಲಿಲ್ಲ. ಆಹ್ವಾನ ಕೈ ಸೇರಿದೊಡನೆ ಸಕಾಲದಲ್ಲಿ ಬರುತ್ತಿದ್ದರು. ಅದೇ ಒಂದು ಪಂಚೆ ಬನಿಯನ್ನು ಟವೆಲು ಧರಿಸಿ ಜಾತ್ರೆ, ನಾಗಮಂಡಲ, ಕೋಲದ ಚಪ್ಪರಗಳಲ್ಲೆಲ್ಲಾ ಅಪ್ಪನ ಕೈಹಿಡಿದು ಸಾಗುವ ಮಗುವಿನಂತೆ ಸುತ್ತಾಡಿ ಕಡ್ಲೆಪುರಿ ತಿಂದು ದೇವರ ರಥ ಎಳೆದು ಸಂಭ್ರಮಿಸುತ್ತಿದ್ದರು. ಹಾಗೆಂದು ಈ ಕುರಿತು ಒಂದೇ ಒಂದು ಬಾರಿಯೂ ವೇದಿಕೆ ಹತ್ತಿ ಶಾಲು ಹಾಕಿಸಿಕೊಂಡು ಸನ್ಮಾನಕ್ಕೆ ಬಾಗಿದವರಲ್ಲ ಶಂಕರ ಕುಂಬಾಳ್ಕರ್.

ಜಾತ್ರೆಯೋ ಕೋಲವೋ ನಾಗಮಂಡಲವೋ ಬ್ರಹ್ಮಕಲಶವೋ ದಿನಾಂಕ ತಿಳಿದೊಡನೆ ವಿಮಾನದ ಟಿಕೇಟು ನಿಶ್ಚಯವಾಗುತ್ತಿತ್ತು. ಅವರೇ ಸಹಾಯ ಮಾಡಿ ಇವತ್ತು ನಾಲ್ಕಾರು ವಾಹನಗಳ ಮಾಲಿಕರಾಗಿರುವ ಟ್ಯಾಕ್ಸಿಯ ಜನ್ನಪ್ಪನವರಿಗೆ ವರ್ತಮಾನದ ರವಾನೆಯಾಗುತ್ತಿತ್ತು. ಊರಿನಲ್ಲಿರುವಷ್ಟು ಕಾಲ ಟ್ಯಾಕ್ಸಿಯ ಜನ್ನಪ್ಪ ಮತ್ತು ಅವರ ಕಾರು ಶಂಕರ ಕುಂಬಾಳ್ಕರ್ ಅವರ ಸೇವೆಗೆ ಮೀಸಲು... ಊರಿನ ಬಂಧುಗಳ ಮನೆಯಲ್ಲಿ ವಾಸ್ತವ್ಯಕ್ಕೆ ಸಿದ್ಧತೆಗಳಾಗುತ್ತಿದ್ದವು. ಬೇಡ ಬೇಡವೆಂದರೂ ಊರಿನ ಪ್ರವೇಶದ ಸ್ವಾಗತಗೋಪುರದ ಬಳಿ ಅದೂ ಅವರ ಕೃಪೆಯಿಂದಲೇ ನಿರ್ಮಾಣಗೊಂಡದ್ದು ಊರಿನ ಪ್ರಮುಖರೆಲ್ಲ ಸೇರಿ ಸ್ವಾಗತಿಸುತ್ತಿದ್ದರು. ಹಾರಕ್ಕೂ ನಿಷೇಧ. ಲಿಂಬೆಹಣ್ಣಿಗೂ ನಿಷೇಧ. ತಮ್ಮದೇ ಹಿರಿಯರ ತೋಟದ ಎಳನೀರು ಎಂಬುದನ್ನು ಖಾತ್ರಿ ಮಾಡಿ ಸ್ವೀಕರಿಸುತ್ತಿದ್ದರು...

ಇಂದೀಗ ಅದೇ ಸ್ವಾಗತಗೋಪುರದ ಎದುರು ಶಂಕರ ಕುಂಬಾಳ್ಕರ್ ನಿಂತಿದ್ದಾರೆ. ಮೌನವಾಗಿ.

ವಿಮಾನಗಳ ಹಾರಾಟ ನಿಂತು ತಿಂಗಳು ಕಳೆದಿದೆ. ಟ್ಯಾಕ್ಸಿಯ ಜನ್ನಪ್ಪನಿಗೆ ತಿಳಿಸುವ ಸಂದರ್ಭ ಬಂದೊದಗಲಿಲ್ಲ. ಊರಿನ ಪರಿಚಯಸ್ಥರ ಯಾರ ದೂರವಾಣಿಗೂ ಸಂಪರ್ಕ ಸಿಗಲಿಲ್ಲ. ಎಲ್ಲ ನಿಷ್ಕ್ರಿಯ. ವ್ಯಾಪ್ತಿಯಿಂದ ಹೊರಗೆ.

ತಮ್ಮ ವರ್ಚಸ್ಸನ್ನು ಉಪಯೋಗಿಸಿಯೂ ಬಹು ಪ್ರಯಾಸದಿಂದ ಪಡೆದ ಅಂತರರಾಜ್ಯ ಪ್ರಯಾಣದ ಪರವಾನಿಗೆ ಬಲದಿಂದ ಹತ್ತಿಪ್ಪತ್ತು ಚೆಕ್‌ಪೋಸ್ಟ್‌ಗಳಲ್ಲಿ ಗಂಟೆಗಟ್ಟಲೆ ಕಾದು ಏನೇನೋ ಸಮಾಧಾನ ಹೇಳಿ ತಮ್ಮದೇ ಐಷಾರಾಮದ ವಾಹನದಲ್ಲಿ ಎರಡು ಮೂರು ದಿನಗಳ ಕಾಲ ಪ್ರಯಾಣ ಮಾಡಿ ಸುಸ್ತಾಗಿ ಬಂದ ಶಂಕರ ಕುಂಬಾಳ್ಕರ್ ಮತ್ತು ಅವರ ಪರಿವಾರ ಬಸವಳಿದಿದೆ.

ಪರಿವಾರವೆಂದರೆ ಎರಡು ಮರಿಮಕ್ಕಳೂ ಸೇರಿದ್ದಾರೆ ಅವರ ಮೂರನೆಯ ತಲೆಮಾರಿಗೆ ಅಣಿಯಾಗುತ್ತಿರುವ ಹಸುಳೆಗಳು. ತನ್ನೂರನ್ನು ಆ ಹೊಸ ಮುಖಗಳಿಗೆ ತೋರಿಸಲೇಬೇಕೆಂಬ ಬಲವಾದ ಆಸೆಯಿಂದ ಈ ಬಾರಿ ಜೊತೆಯಲ್ಲಿ ಕರೆದುಕೊಂಡು ಬಂದಿದ್ದಾರೆ ಶಂಕರ ಕುಂಬಾಳ್ಕರ್.

ಶಂಕರ ಕುಂಬಾಳ್ಕರ್ ಕಾರಿನಿಂದ ರೋಡಿಗಿಳಿದು ಆಗಸವನ್ನು ದಿಟ್ಟಿಸುತ್ತಿದ್ದಾರೆ. ಉಳಿದವರೆಲ್ಲ ಹವಾನಿಯಂತ್ರಿತ ವಾಹನದೊಳಗೇ ತೂಕಡಿಕೆಯಲ್ಲಿದ್ದಾರೆ...

ಅವರೇ ತಮ್ಮ 'ಏನಾದರೂ ಮಾಡುತಿರು ತಮ್ಮ' ಎಂದು ಹೇಳುವ ಮಾತಿನೊಂದಿಗೆ ಸೇರಿಸುತ್ತಿದ್ದ ಇನ್ನೊಂದು ಸಾಲು 'ಕಾಲ ಇದ್ದಂತೆ ಇರುವುದಿಲ್ಲವಪ್ಪ' ಎಂಬ ಕಠೋರ ಸತ್ಯದ ಚಿತ್ರಣ ಅವರ ಕಣ್ಣ ಮುಂದೆ ಹಾದುಬರುತ್ತಿದೆ.

ಹರಕು ಚಡ್ಡಿಯಲ್ಲಿ ರಾತೋರಾತ್ರಿ ಊರು ಬಿಟ್ಟ ಬಾಲಕ ಮತ್ತೆ ಆಗರ್ಭ ಶ್ರೀಮಂತ ಠೀವಿಯಲ್ಲಿ ಊರಿಗೆ ಬರತೊಡಗಿದ ಸಂದರ್ಭಗಳ ಚಿತ್ರಣಗಳ ಸರಮಾಲೆಯೇ ಅವರ ಮನಸ್ಸಿನೊಳಗೆ ಮೂಡುತ್ತಿದೆ.

ಬ್ರಹ್ಮಕಲಶದ ದಿನ ನಿಶ್ಚಯವಾಗಿದೆ ಬನ್ನಿ, ದೊಡ್ಡ ಕಟ್ಟೆಯ ನಿಮಗೆ ತುಂಬ ನಂಬಿಕೆಯ ಪಂಜುರ್ಲಿಯ ಕೋಲ ದಿವಸ ನಿಶ್ಚಯವಾಗಿದೆ ತಪ್ಪಿಸಬೇಡಿ ಊರಿನ ಜಾತ್ರೆಗೆ ಬಾರದೆ ಇರಬೇಡಿ. ಈ ಬಾರಿ ಜೋಡಾಟವಿದೆ. ಪ್ರಸಿದ್ಧ ಯಕ್ಷಗಾನ ಮೇಳಗಳಿಂದ ನೀವು ಬರಲೇಬೇಕು ಒಂದೇ ಎರಡೇ? ಊರಿನಿಂದ ಹೇಳಿಕೆ ಬಂದರೆ ಸಾಕು, ಕೆಲವೊಮ್ಮೆ ಹೇಳಿಕೆ ಕೇಳಿಕೆ ಬೇಕೆಂದೇ ಇಲ್ಲ. ತಾನೆ ತನ್ನ ಡೈರಿಯಲ್ಲಿ ನಮೂದಿಸಿದನ್ನು ಗಮನಿಸಿ ಊರಿಗೆ ಬರುತ್ತಿದ್ದ ಆ ಉತ್ಸಾಹದ ಚಿತ್ರಣ ಇಂದೀಗ ನೆತ್ತಿಯನ್ನು ಸುಡುತ್ತಿರುವ ಬಿಸಿಲನ್ನೇ ಬೆಳದಿಂಗಳಾಗಿಸುತ್ತಿದೆಯಲ್ಲ...

ಕಿವಿ ಅರಳಿಸಿದರು ಶಂಕರ ಕುಂಬಾಳ್ಕರ್.

ಆಳೆತ್ತರದ ಅಣಿಯೇರಿಸಿ ಹೊಳೆಯುವ



ಸಿರಿ ಕಟ್ಟೆ ಗಗ್ಗರದ ನಾದದಲೆಯನ್ನೆಬ್ಬಿಸಿ ಮಾರು ದೂರದಲ್ಲಿರುವ ದೊಡ್ಡ ಕಟ್ಟೆಯ ಭೂತಸ್ಥಾನದಿಂದ ಪಂಜುರ್ಲಿ ಭೂತದ ಆವೇಶಧಾರಿ ಪಂಚದೀವಟಿಗೆಯನ್ನು ಅರಳಿಸುತ್ತ ಓಡಿಬರುತ್ತಿದ್ದಾನಲ್ಲ ಎಂದೆನ್ನಿಸಿ ಕಣ್ಣರಳಿಸಿದರು...

ಇತ್ತೀಚೆಗಂತೂ ಒಂದು ವರ್ಷವೂ ಕೋಲವನ್ನು ತಪ್ಪಿಸುತ್ತಿರಲಿಲ್ಲ. ರಾತ್ರಿಯಿಡೀ ಕೋಲದ ಚಪ್ಪರದಲ್ಲಿರಿಸುತ್ತಿದ್ದ ಆಸನದಲ್ಲಿ ಕುಳಿತು ತದೇಕಚಿತ್ತರಾಗಿ ಭೂತನರ್ತಕರ ಆವೇಶಭರಿತ ನರ್ತನವನ್ನು ನೋಡುತ್ತಿದ್ದುದು ನೆನಪಾಗಿ, ಕನಸಾಗಿ ಕಾಡತೊಡಗಿತೇ?

ವಾದ್ಯಗಳ ತೀವ್ರತೆಗೆ ಮೈಯಲುಗಿಸಿ ಹತ್ತಾರು ಬಾರಿ ಕುಣಿದು ಕುಪ್ಪಳಿಸಿ ಕಣ್ಣರಳಿಸಿ ತನ್ನೆದುರು ಬಂದು ಆ ಸಂಜ್ಞಾ ಭಾಷೆಯಲ್ಲಿ – 'ನಾನೀ ಲೋಕದವನಲ್ಲ, ನಿನಗಾಗಿ ಮೇಲಿಂದ ಕೆಳಗೆ ಬಂದವ, ನೀನು ವಿಷಕೊಟ್ಟರೂ ಅಮೃತ ಮಾಡಿ ಕುಡಿಯವವ, ನಿನ್ನ ನಂಬಿಕೆಗೆ ಇಂಬು ಕೊಡುವವ, ನಂಬು ನನ್ನನ್ನು, ನಂಬು ನಂಬು ನಂಬು' ಎಂದು ಮಿರಿಮಿರಿ ಮಿರುಗುವ ಸಿರಿಸಿಂಗಾರದ ನಡುವೆ ಕೈಯಲ್ಲಿರುವ ದೊಂದಿಯಿಂದ ಎದೆಯನ್ನು ಸುಟ್ಟುಕೊಳ್ಳುತ್ತ ಒಂದು ಭಾವಬಂಧವನ್ನು ಬೆಸೆಯುತ್ತಿದ್ದ ಪ್ರೀತಿಯ ಪಂಜುರ್ಲಿಯ ನೆನಪು ಕಾಡತೊಡಗಿತೇ!....

ಸುಡುಸುಡು ಬಿಸಿಲು. ತಂಪಾಯಿತು. ಹಗಲು ರಾತ್ರಿಯಾಯತು. ಕೋಲದ ಚಪ್ಪರದ ದೊಂದಿಗಳು ಬೆಳಗಿದವು. ವಾದನಗಳ ಬಡಿತ ಆಗಸವನ್ನು ಮುಟ್ಟಿತು.

ಕ್ಷಣಕಾಲ ಶಂಕರ ಕುಂಬಾಳ್ಕರ್ ನಿಂತಲ್ಲಿಯೇ ಆ ಕಾಲಕ್ಕೆ, ಕೋಲದ ಲೋಕಕ್ಕೆ ನೆಗೆದರು. ಕಣ್ಣರಳಿಸಿ ಕಿವಿಯರಳಿಸಿ ಭೂತದ ಅಣಿಯನ್ನು ಗಗ್ಗರದ ಧ್ವನಿಯನ್ನು ನಿರೀಕ್ಷಿಸಿದರು...

ಕಾಣಲಿಲ್ಲ ಪ್ರೀತಿಯ ಪಂಜುರ್ಲಿಯ ಅಣಿ ಕೇಳಿ ಬರಲಿಲ್ಲ ಆವೇಶಧಾರಿ ನರ್ತಕನ ಹೆಜ್ಜೆಗಾರಿಕೆಗೆ ಅನುಗುಣವಾಗಿ ಉಲಿಯುತ್ತಿದ್ದ ಗಗ್ಗರನಾದದ ತರಂಗಿತತೆ ವಾದನಗಳ ಬಡಿತ ತೋಟದ ಎಳನೀರಿಗೆ ಕತ್ತಿ ತಾಗಿಸಿದಾಗ ಚಿಮ್ಮಿ ಹಾರುತ್ತಿದ್ದ ಎಳನೀರ ಬುಗ್ಗೆ. ಊರ ಮಂದಿಯ ಆತ್ಮೀಯ ಕಲರವ... ಕಾಣಲಿಲ್ಲ ಏನೂ, ಕೇಳಲಿಲ್ಲ ಏನೂ...

ಎಲ್ಲವೂ ನಿಶ್ಶಬ್ದ. ಮೌನ ಮೌನ, ಸ್ಮಶಾನ ನೀರವತೆ.

ಕಂಡುಬಂದದ್ದು ಒಂದೇ ಒಂದು ಫಲಕ :

ಸ್ವಾಗತಗೋಪುರಕ್ಕೆ ಅಡ್ಡವಾಗಿ ಕಟ್ಟಿದ ಕಬ್ಬಿಣದ ಮತ್ತು ಮುಳ್ಳಿನ ಬಲವಾದ ಬೇಲಿ ಅದಕ್ಕೆ ತಾಗಿ ಕಟ್ಟಿದ ಫಲಕದ ಒಕ್ಕಣಿಕೆ:

'ನಮ್ಮೂರಿನಲ್ಲಿ ಸೋಂಕಿಲ್ಲ. ಪರವೂರಿನವರಿಗೆ ಪ್ರವೇಶವಿಲ್ಲ... ದಯವಿಟ್ಟು ಮಹಾನಗರಿಯಿಂದ ನಮ್ಮೂರಿಗೆ ಯಾರೂ ಬರಬೇಡಿ.'

ತಮ್ಮ ಸ್ವಂತ ವಾಹನವನ್ನು ಹಿಂದಕ್ಕೆ ತಿರುಗಿಸು ಎಂದು ಹೇಳಿ ಒಳಗೆ ನುಸುಳಿದ ಶಂಕರ ಕುಂಬಾಳ್ಕರ್ ಅವರಿಗೆ ಕ್ಷೀಣವಾಗಿ ಕೇಳಿಬಂದಿತು ಒಂದು ಬಿಕ್ಕಳಿಕೆಯಂತೆ ಅವರ ಪ್ರೀತಿಯ ಪಂಜುರ್ಲಿಯ ಗಗ್ಗರದ ಯಾವುದೋ ಲೋಕದ ಧ್ವನಿ.